ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಗುರುವಾರ ೨೧ನೇ ಮಾರ್ಚ್ ೧೯೯೧, ಫಾಲ್ಗುಣ ೩೦, ಶಕ ೧೯೧೨

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **ಶ್ರೀ ಎಸ್.ಎಂ. ಕೃಷ್ಣ** ಅವರು ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು:

ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಎರಡನೇ ದರ್ಜೆ ಹಾಗೂ ಮೂರನೇ ದರ್ಜೆ ಗುಮಾಸ್ತರಿಗೆ ಮುಂಬಡ್ತಿ

1752 - ಶ್ರೀ ಬಿ.ಸಿ. ಮಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಎರಡನೇ ದರ್ಜೆ ಹಾಗೂ ಮೊದಲನೆಯ ದರ್ಜೆ ಗುಮಾಸ್ತರಿಗೆ ಹಿಂದೆ ಮುಂಬಡ್ತಿ ಯಾವಾಗ ಕೊಡಲಾಯಿತು?

ಆ) ಅನೇಕ ವರ್ಷಗಳಿಂದ ಮುಂಬಡ್ತಿ ಸಿಗದೇ ಇರುವವರಿಗೆ ಆಗಿರುವ ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರ ಬಗೆಹರಿಸುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):

ಅ) ಜೇಷ್ಠತೆ, ಅರ್ಹತೆ ಹಾಗೂ ಖಾಲಿ ಹುದ್ದೆಗಳನ್ನು ಗಮನದಲ್ಲಿಟ್ಟುಕೊಂಡು ಮುಂಬಡ್ತಿಯನ್ನು ಆಗಿಂದಾಗ್ಗೆ ,ಕೊಡಲಾಗುತ್ತಿದೆ.

ಆ) ಒಂದೇ ಹುದ್ದೆಯಲ್ಲಿ 15 ವರ್ಷಗಳಿಗಿಂತಲೂ ಹೆಚ್ಚು ಸೇವೆ ಸಲ್ಲಿಸಿರುವವರಿಗೆ ಮುಂಬಡ್ತಿ ನೀಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ.ಸಿ. ಮಧುಸ್ವಾಮಿ : ಅಧ್ಯಕ್ಷರೆ, ಇದರಲ್ಲಿ ಜೇಷ್ಠತೆ, ಅರ್ಹತೆ ಹಾಗೂ ಖಾಲಿ ಹುದ್ದೆಗಳನ್ನು ಗಮನದಲ್ಲಿಟ್ಟುಕೊಂಡು ಹಿಂದೆ ಯಾವಾಗ ಬಡ್ತಿ ಕೊಟ್ಟಿದ್ದೀರಿ ಎಂದು ಕೇಳಿದ್ದೇನೆ. ಈ ತಮ್ಮ ಈ ಉತ್ತರ ನಮಗೆ ಗೊತ್ತಿತ್ತು. ಹಿಂದೆ ಯಾವಾಗ ಬಡ್ತಿ ಕೊಟ್ಟಿತ್ತು ಎಂದು ಪ್ರಶ್ನೆ ಕೇಳಿದರೆ, ಕೊಡಲಾಗುತ್ತಿದೆ ಎಂದು ಹೇಳಿದರೆ ಇದರ ಔಚಿತ್ಯ ನನಗೆ ಅರ್ಥವಾಗುವುದಿಲ್ಲ. ಮತ್ತು ಇದು ಒಂದಕ್ಕೊಂದು ಸಂಬಂಧವಿಲ್ಲ. ತಾವು ಹೈಯರ್ ಕೇಡರ್‌ನಲ್ಲಿ ಪ್ರಮೋಷನ್ ಕೊಡುತ್ತೀರಿ, ಹಾಗೆಯೇ ಫಸ್ಟ್ ಡಿವಿಜನ್, ಸೆಕೆಂಡ್ ಡಿವಿಜನ್ ಗುಮಾಸ್ತರಿಗೆ ಏತಕ್ಕೆ ಬಡ್ತಿ ಕೊಡುತ್ತಿಲ್ಲ ಎಂಬ ಮೂಲ ಉದ್ದೇಶದಿಂದ ಪ್ರಶ್ನೆಯನ್ನು ಕೇಳಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರವನ್ನು ಹೇಳಬೇಕು. ಹಿಂದೆ ಯಾವಾಗ ಅವರಿಗೆ ಬಡ್ತಿ ಕೊಟ್ಟಿದ್ದು ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಫಸ್ಟ್ ಡಿವಿಜನ್, ಸೆಕೆಂಡ್ ಡಿವಿಜನ್ ಗುಮಾಸ್ತರಿಗೆಲ್ಲಾ ಆ ಜೆಲ್ಲೆಯಲ್ಲಿಯೇ ಪ್ರಮೋಷನ್ ಕೊಡುತ್ತಿದ್ದಾರೆ. ಯಾವಾಗ ವೇಕೆನ್ಸಿ ಆಗುತ್ತದೆ. ಆಗ ಅವರ ಕ್ವಾಲಿಫಿಕೇಷನ್ ಮತ್ತು ಅರ್ಹತೆ ನೋಡಿಕೊಂಡು ಕೊಡುತ್ತಾರೆ. ಇದು ಜಿಲ್ಲಾಧಿಕಾರಿಯವರ ಹಂತದಲ್ಲಿಯೇ ಮಾಡುವಂಥಾದ್ದು ಇದೆ. ತಾವು ಸ್ಪೆಸಿಫಿಕ್ ಆಗಿ ಇಂತಹ ಜಿಲ್ಲೆ ಎಂದು ಕೇಳಿದರೆ, ನಾನು ಉತ್ತರ ಒದಗಿಸಿಕೊಡಬಹುದಾಗಿತ್ತು. ತಾವು ಇಡೀ ರಾಜ್ಯದ್ದು ಕೇಳಿದ್ದೀರಿ. ಆಯಾ ಜಿಲ್ಲಾಧಿಕಾರಿಯವರೇ ಬಡ್ತಿ ವಿಷಯದಲ್ಲಿ ನೋಡಿಕೊಳ್ಳುತ್ತಾರೆ. ಈಗ ತಾವು ಎಂದು ಮಾಡಿದ್ದೀರಿ ಎಂದು ಕೇಳಿದ್ದೀರಿ. ಆ ಮಾಹಿತಿಯನ್ನು ಈ ಪ್ರಶ್ನೆಯಲ್ಲಿ ಒದಗಿಸಿಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಜೆ.ಸಿ. ಮಧುಸ್ವಾಮಿ : ಈಗ 15 ವರ್ಷಕ್ಕೆ ಒಂದು ಬಡ್ತಿಯನ್ನು ಕೊಡುವ ಬಗ್ಗೆ ಒಂದು ರಾಜ್ಯಮಟ್ಟದ ಪಾಲಿಸಿಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ಕೆ.ಸಿ.ಎಸ್.ಆರ್. ಪ್ರಕಾರ ಅವರಿಗೆ ಟೈಮಾಬಾಂಬ್ ಪ್ರಮೋಷನ್‌ಗೆ ಅವಕಾಶ ಇತ್ತೇ ಇಲ್ಲವೇ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊನ್ನೆ ರಾಜ್ಯಪಾಲರ ಭಾಷಣದಲ್ಲಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಮ್ಯಾಕ್ಸಿಮ್‌ನು ಸ್ಕೇಲಿಗೆ ರೀಚ್ ಆದ ಮೇಲೆ ಅದೇ ಸ್ಕೇಲ್‌ನಲ್ಲಿ ಕಂಟಿನ್ಯೂಯಸ್ ಆಗಿ 15 ವರ್ಷ ಸೇವೆಯನ್ನು ಸಲ್ಲಿಸಿದರೆ, ಅಂತಹವರಿಗೆ ಒಂದು ಬಡ್ತಿಯನ್ನು ಕೊಡಬೇಕು ಎನ್ನತಕ್ಕ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದರ ಅನುಕೂಲ ಯಾವುದೇ ಇಲಾಖೆಯಲ್ಲಿ ಇದ್ದರೂ ಆಗುತ್ತದೆ. ಆ ಒಂದು ಮ್ಯಾಕ್ಸಿಮಮ್ ಸ್ಕೇಲ್‌ಗೆ ಮುಟ್ಟಿದಂತಹವರಿಗೆ ಅನುಕೂಲ ಆಗುತ್ತದೆ.

ಶ್ರೀ ಜೆ.ಸಿ. ಮಧುಸ್ವಾಮಿ : ಕೆ.ಸಿ.ಎಸ್.ಆರ್. ಪ್ರಕಾರ ಮೊದಲು 12 ವರ್ಷಕ್ಕೆ ಟೈಮ್‌ಬೌಂಡ್ ಪ್ರಮೋಷನ್ ಕೊಡಲಿಕ್ಕೆ ಅವಕಾಶ ಇತ್ತೇ ಎಂದು ನಾನು ಸ್ಪಷ್ಟೀಕರಣ ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಟೈಮ್‌ಬೌಂಡ್ ಪ್ರಮೋಷನ್‌ಗೆ ಕೆ.ಸಿ.ಎಸ್.ಆರ್. ರೂಲ್‌ನಲ್ಲಿದೆ. ಅದು ಒಂದುಕಡೆ. ಇದು ಸ್ಟ್ಯಾಗ್ನೇಷನ್ ಏನಾಗಿದೆ ಅದರ ಬಗ್ಗೆ ತಾವು ಕೇಳಿದ್ದೀರಿ. ತಾವು 15 ವರ್ಷದ ಬಗ್ಗೆ ಏನು ಕೇಳಿದ್ದೀರಿ ಅದರ ಬಗ್ಗೆ ನಾನು ಉತ್ತರ ಕೊಡುತ್ತಿದ್ದೇನೆ. ಅದು ಡಿ.ಪಿ.ಎ.ಆರ್.ಗೆ ಸಂಬಂಧಪಟ್ಟಂಥ ವಿಷಯ ಇದೆ. ನಮ್ಮ ಖಾತೆಯಲ್ಲಿ 15 ವರ್ಷ ಸತತವಾಗಿ ಒಂದೇ ಸೇವೆಯಲ್ಲಿ ಕೆಲಸ ಮಾಡುತ್ತಿದ್ದರೆ ಅವರಿಗೆ ಒಂದು ಬಡ್ತಿಯನ್ನು ಕೊಡುತ್ತೀರಾ ಎನ್ನುವ ಪ್ರಶ್ನೆ ಇದೆ. ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಈ ಒಂದು ಪಾಲಿಸಿ ಮ್ಯಾಟರ್ ಡಿಕ್ಲೇರ್ ಮಾಡಿದ್ದಾರೆ ಮತ್ತು ಅದೇ ಸ್ಕೇಲ್ನಲ್ಲಿ 15 ವರ್ಷ ಸೇವೆ ಮಾಡಿದಂಥವರಿಗೆ ಒಂದು ಬಡ್ತಿ ಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇನೆ.

ಶ್ರೀ ಸಿ. ಬೈರೇಗೌಡ : ಇದು ಜಿಲ್ಲಾಮಟ್ಟದಲ್ಲಿ ನಡೆಯುತ್ತಿರುತ್ತಿದೆಯೋ ಅಥವಾ ವಿಭಾಗಮಟ್ಟದಲ್ಲಿ ನಡೆಯುತ್ತಿದೆಯೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವ ನೇಮಕಾತಿ ಎಂದು ಕೇಳಿದರೆ ಹೇಳಬಹುದು.

ಶ್ರೀ ಸಿ. ಬೈರೇಗೌಡ : ಈ ಬಡ್ತಿ ಕೊಡಬೇಕಾದಂಥ ಕಾರಣ ಏನೆಂದರೆ, ಜಿಲ್ಲಾಧಿಕಾರಿಗಳಿಗೆ ಅಧಿಕಾರ ಬರಬೇಕಾದರೆ, ಜಿಲ್ಲಾಮಟ್ಟದಲ್ಲಿ ನೇಮಕ ಆಗಿದ್ದರೆ ಮಾತ್ರ ಅವರಿಗೆ ಅಧಿಕಾರ ಬರುತ್ತದೆ. ವಿಭಾಗಮಟ್ಟದಲ್ಲಿ ಆಗಿದ್ದರೆ ಜಿಲ್ಲಾಧಿಕಾರಿಗಳಿಗೆ ಆ ಅಧಿಕಾರ ಬರುವುದಿಲ್ಲ ಎನ್ನುವ ಕಾರಣಕೋಸ್ಕರ ಪ್ರಶ್ನೆ ಕೇಳುತ್ತಿದ್ದೇನೆ. ಜಿಲ್ಲಾಮಟ್ಟದಲ್ಲಿ ನೇಮಕಾತಿ ಕೊಡತಕ್ಕಂಥ ಅವಕಾಶ ಇದ್ದರೆ, ಜಿಲ್ಲಾಮಟ್ಟದಲ್ಲಿ ಅವರಿಗೆ ಬಡ್ತಿ ಕೂಡ ಸಿಕ್ಕುತ್ತದೆ. ಅದು ಇಲ್ಲದಿದ್ದರೆ, ವಿಭಾಗಮಟ್ಟದಲ್ಲಿ ನಡೆದರೆ, ವಿಭಾಗದ ಅಧಿಕಾರಿಗಳಿಗೆ

ಆ ಅಧಿಕಾರ ಇರುತ್ತದೆ. ಆದ್ದರಿಂದ, ನಾನು ಕೇಳುತ್ತಿರುವುದು, ಇವರನ್ನು ಜಿಲ್ಲಾಮಟ್ಟದಲ್ಲಿ ನೇಮಿಸುತ್ತೀರೋ ಅಥವಾ ವಿಭಾಗ ಮಟ್ಟದಲ್ಲಿ ನೇಮಿಸುತ್ತೀರೋ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿಲೇಜ್ ಅಕೌಂಟೆಂಟ್ಸ್ ಎಲ್ಲಾ ಡಿಸ್ಟ್ರಿಕ್ಟ್‌ನಲ್ಲಿ ಡೆಪ್ಯುಟಿ ಕಮೀಷನರ್‌ರವರ ಅಧ್ಯಕ್ಷತೆಯಲ್ಲಿಯೇ ನೇಮಿಸಿಕೊಳ್ಳತಕ್ಕದ್ದು. ಅವರೆಲ್ಲರೂ (ಸಿ) ಗ್ರೂಪ್‌ನಲ್ಲಿಟ್ಟಿರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಪ್ರಶ್ನೆ ಟ್ರಾನ್ಸ್‌ಫರ್ ಆಗಿರಬಹುದು.

ಅಧ್ಯಕ್ಷರು : ಹನುಮೇಗೌಡರೆ, ಈ ಪ್ರಶ್ನೆಯನ್ನು ನೀವು ಮಾನ್ಯ ಕಂದಾಯ ಮಂತ್ರಿಗಳಿಗೆ ಏತಕ್ಕೆ ಹಾಕಿದಿರಿ? ಎಷ್ಟೆಷ್ಟು ಎಕರೆ ಖಾಯಂ ನೀರಾವರಿ ಸೌಲಭ್ಯ ಇದೆ ಎನ್ನತಕ್ಕ ಪ್ರಶ್ನೆಯನ್ನು ಮಾನ್ಯ ನೀರಾವರಿ ಮಂತ್ರಿಗಳಿಗೆ ಹಾಕಬೇಕಾಗಿತ್ತು. ಈಗ ಇದನ್ನು ಅವರಿಗೆ ಟ್ರಾನ್ಸ್‌ಫರ್ ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಕಳೆದ 8-10 ವರ್ಷಗಳಿಂದ ಪ್ರತಿವರ್ಷವೂ ಕ್ಷಾಮ ಬರುತ್ತಿದೆ. ಈ ನೀರಾವರಿಯಿಂದ ಏನಾದರೂ ಅನುಕೂಲವಾಗುತ್ತದೇನೋ ಎಂದು ಹೇಳಿ ಈ ಪ್ರಶ್ನೆಯನ್ನು ಕೇಳಿದೆ.

ಅಧ್ಯಕ್ಷರು : ಇದಕ್ಕೆ ನೀರಾವರಿ ಮಂತ್ರಿಗಳು ಉತ್ತರ ಹೇಳಬೇಕಾಗುತ್ತದೆ. ಈಗ ಅವರು ಇಲ್ಲವಲ್ಲಾ.

ಶ್ರೀ ಕೆ.ಹೆಚ್. ಹನುಮೇಗೌಡ : ಹಾಗಾದರೆ ನಾಳೆಗೆ ಹಾಕಿ.

ಅಧ್ಯಕ್ಷರು : ಟ್ರಾನ್ಸ್‌ಫರ್ ಮಾಡುತ್ತೇವೆ.

ಕರ್ನಾಟಕ ರಾಜ್ಯದಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ.

1687 - ಶ್ರೀ ಸಿ. ಭೈರೇಗೌಡ (ವೇಮಗಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆಂದು ಸರ್ಕಾರವು ಇದುವರೆಗೂ ಸ್ವಾಧೀನಪಡಿಸಿಕೊಂಡಿರುವ ಜಮೀನು ಎಷ್ಟು?*

ಆ) *ಈಗಾಗಲೇ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಸಂಬಂಧಪಟ್ಟ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ನೀಡಲಾಗಿದೆಯೇ?*

ಇ) *ಇಲ್ಲದಿದ್ದಲ್ಲಿ, ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಸ್ವಾಧೀನಪಡಿಸಿ ಕೆಜಾಂಡಿರುವ ಜಮೀನನ್ನು ನೀಡಲು ಸರ್ಕಾರಕ್ಕೆ ಇರುವ ಅಡ್ಡಿಯೇನು?*

ಈ) *ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ನೀಡದೇ ಇರುವುದರಿಂದ ಸದರಿ ಸಂಘದ ಸದಸ್ಯರಿಗೆ ಆಗಿರುವ ಅನಾನುಕೂಲದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 7402-34 ಎಕರೆಗಳು

ಆ) ಹೌದು, ಬೆಂಗಳೂರು ನಗರ ಹೊರತುಪಡಿಸಿ.

ಇ) ಬೆಂಗಳೂರಿಗೆ ಸಂಬಂಧಿಸಿದಂತೆ ಸರ್ಕಾರದಿಂದ ನೀತಿ ನಿರೂಪಿಸುವುದನ್ನು ಹೊರತುಪಡಿಸಿ ಯಾವುದೇ ಅಡ್ಡಿ ಆತಂಕವಿರುವುದಿಲ್ಲ.

ಈ) ಸಂಬಂಧದಲ್ಲಿ ಸಚಿವ ಸಂಪುಟದ ಉಪ ಸಮಿತಿ ನೇಮಿಸಿದ್ದು ಈ ಸಮಿತಿ ವರದಿ ಬಂದಕೂಡಲೇ ಈ ಪ್ರಶ್ನೆ ನಿರ್ಧರಿಸಲಾಗುವುದು.